# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103. ಫ್ಯಾಕ್ಸ್ : 0816-2255761, ದೂರವಾಣಿ : 2272280
**email : tudatmk2009@yahoo.co.in - website: tuda.** ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ

ನಂ.ಟಿಯುಡಿಎ/ಎಡಿಎಂ/ವಾ.ಸ.ಕೆಎ06–ಎಂ4242/4318/2015–16 ದಿನಾಂಕ 22–03–2016

## ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

**ವಿಷಯ :** ಪ್ರಾಧಿಕಾರಕ್ಕೆ ಸೇರಿದ ಪೆಟ್ರೋಲ್ ಅಂಬಾಸಿಡರ್ ಕಾರ್ ಸಂಖ್ಯೆ ಕೆ.ಎ.06 ಎಂ. 4242 ನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

**ಉಲ್ಲೇಖ :** ಸರ್ಕಾರದ ಪತ್ರ ಸಂಖ್ಯೆ ನಅಇ/194/ಬೆಂರೂಪ್ರಾ/2012 ದಿನಾಂಕ 26–12–2012

* * *

ಈ ಕೆಳಕಂಡ ಸುಸ್ಥಿತಿಯಲ್ಲಿರುವ ಪೆಟ್ರೋಲ್ ಅಂಬಾಸಿಡರ್ ಕಾರ್ ಸಂಖ್ಯೆ ಕೆ.ಎ.06 ಎಂ. 4242 ನ್ನು ಅದು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ದಿನಾಂಕ 20–04–2016 ರಂದು ಬೆಳಿಗ್ಗೆ 11.30 ಗಂಟೆಗೆ ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುತ್ತದೆ.

| ವಾಹನ ಸಂಖ್ಯೆ | ತರಹೆ ಮತ್ತು ಮಾದರಿ | ಹರಾಜು ಮಾಡುವ ಅಧಿಕಾರಿಗಳು ಮತ್ತು ಹರಾಜು ಸ್ಥಳ |
|---|---|---|
| ಕೆಎ–06 ಎಂ–4242 | ಪೆಟ್ರೋಲ್ ಅಂಬಾಸಿಡರ್ ಕಾರ್ 1999 ನೇ ಮಾದರಿ | ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿ ಆವರಣ |

## ನಿಬಂಧನೆಗಳು :

1) ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ರೂ. 5000/- (ಐದು ಸಾವಿರ ರೂಪಾಯಿಗಳು ಮಾತ್ರ) ಠೇವಣಿಯಾಗಿ ನಗದು ಪಾವತಿ ಮಾಡಿ ರಸೀತಿ ಪಡೆಯತಕ್ಕದ್ದು.
2) ಬಹಿರಂಗ ಹರಾಜಿನ ದಿನ ಬಿಡ್‌ದಾರರು ಮುಂಚಿತವಾಗಿ ರಸೀತಿಯನ್ನು ಹಾಜರುಪಡಿಸಿ ಬಿಡ್‌ನಲ್ಲಿ ಭಾಗವಹಿಸುವುದು.
3) ಬಿಡ್‌ದಾರರು ಹಾಜರಾಗದಿದ್ದಲ್ಲಿ ಠೇವಣಿದಾರರ ಅಧಿಕೃತ ಬರವಣಿಗೆ ಪಡೆದು ಅವರ ಪರವಾಗಿ ಒಬ್ಬರು ಏಜೆಂಟರು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.
4) ಹರಾಜು ಆಖೈರಾದ ಕೂಡಲೇ ಅಂತಿಮ ಬಿಡ್‌ದಾರರು ಬಿಡ್ ಮೊಬಲಗಿನಲ್ಲಿ ಶೇಕಡ 50 ರ ಭಾಗ ಹಣವನ್ನು ಕೂಡಲೆ ಪಾವತಿ ಮಾಡಿ ರಸೀತಿ ಪಡೆಯತಕ್ಕದ್ದು.
5) ಅಧಿಕೃತ ಬಿಡ್‌ದಾರರು ಶೇಕಡ 50 ರ ಭಾಗ ಹಣವನ್ನು ಪಾವತಿ ಮಾಡದಿದ್ದಲ್ಲಿ ಸದರಿ ವಾಹನವನ್ನು ಮತ್ತೆ ಬಹಿರಂಗ ಹರಾಜು ಮಾಡಲಾಗುವುದು. ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
6) ಅಂತಿಮ ಬಿಡ್ ನಿರ್ಣಯವು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಸೇರಿರುತ್ತದೆ.
7) ಉಳಿದ ಶೇಕಡ 50 ರ ಭಾಗದ ಹಣವನ್ನು 7 ದಿನಗಳಲ್ಲಿ ಪೂರ್ತಿ ಪಾವತಿ ಮಾಡಿ ರಸೀತಿ ಪಡೆಯತಕ್ಕದ್ದು. ವಾಯಿದೆ ಮೀರಿದಲ್ಲಿ ಮೊದಲು ಕಟ್ಟಿದ ಶೇಕಡ 50 ರ ಭಾಗದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

-2-

8) ವಾಹನವು ನಿರುಪಯುಕ್ತವಾಗಿರುತ್ತದೆ ಎಂಬ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುತ್ತಾರೆ.

9) ವಾಹನಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಆಯುಕ್ತರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯತಕ್ಕದ್ದು.

10) ವಾಹನವನ್ನು ಪರೀಕ್ಷಿಸಲು ಇಷ್ಟವುಳ್ಳವರು ಕಛೇರಿ ವೇಳೆಯಲ್ಲಿ ಆಯುಕ್ತರ ಅನುಮತಿ ಪಡೆದು ಪರೀವೀಕ್ಷಿಸಬಹುದು.

11) ಬಿಡ್ ಮೊಬಲಗಿಗೆ ಮಾರಾಟ ತೆರಿಗೆಯನ್ನು ಪಾವತಿ ಮಾಡಬೇಕು.

12) ಅಂತಿಮ ತೀರ್ಮಾನ ಕೈಗೊಳ್ಳುವ ಅಧಿಕಾರ ಪ್ರಾಧಿಕಾರದ ಆಯುಕ್ತರದ್ದಾಗಿರುತ್ತದೆ.

13) ವಾಹನವು ಯಾವ ಸ್ಥಿತಿಯಲ್ಲಿದೆಯೋ, ಎಲ್ಲಿದೆಯೋ, ಹೇಗಿದೆಯೋ, ಹಾಗೆಯೇ ವಿಲೇ ಮಾಡಲಾಗುವುದು.

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.